**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.1332/2024**

ಪಿ.ಡಬ್ಲ್ಯೂ: 1

ಸಿ.ಡಬ್ಲ್ಯೂ: 1

ಸಾಕ್ಷಿದಾರರ ಹೆಸರು : ಶ್ರೀನಿವಾಸ

ತಂದೆಯ ಹೆಸರು: :ಯೋಗಿಶ್ ಜಿ

ವಯಸ್ಸು : **37 ವರ್ಷ**

ಉದ್ಯೋಗ : ಡಾಕ್ಟರ್

ವಾಸಸ್ಥಳ : ಚಂಡಿಗಡ್

**ದಿನಾಂಕ: 02-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ನನ್ನ ತಂದೆಗೆ ಬಾವಿಕೆರೆಯಲ್ಲಿ ಜಮೀನು ಇದ್ದು, ಅದರಲ್ಲಿ ಅಡಿಕೆ ತೋಟ ಇರುತ್ತದೆ. ದಿನಾಂಕ: 20-06-2024 ರಂದು ನನ್ನ ತಂದೆ ಕಡೂರಿನಿಂದ ಬಾವಿಕೆರೆಯಲ್ಲಿರವ ನಮ್ಮ ಸಂಬಂಧಿಕರ ಮನೆ ಹತ್ತಿರ ಹೋಗಿ ಅಲ್ಲಿಇಟ್ಟಿದ ತಮ್ಮ ಬೈಕ್ ನಂ .ಕೆ ಎ 18 ಎಕ್ಸ 8760 ವನ್ನು ತೆಗೆದುಕೊಂಡು ಅವರ ಸ್ನೇಹಿತರಾದ ಮಾರ್ಕಂಡಯ್ಯರವರನ್ನು ಬೈಕಿನ ಹಿಂಬದಿಯಲ್ಲಿ ಕೂರಿಸಿಕೊಂಡು ಅಲ್ಲಿಂದ ಬಾವಿಕೆರೆಯಲ್ಲಿದ್ದ ಪೆಟ್ರೋಲ್ ಬಂಕ್ ಗೆ ಹೋಗಿ ಪೆಟ್ರೋಲ್ ನ್ನು ತುಂಬಿಸಿಕೊಂಡು ಅಲ್ಲಿಂದ ತರೀಕೆರೆಯ ಮುಖ್ಯ ರಸ್ತೆಗೆ ಹೋಗುವ ಸಮಯದಲ್ಲಿ ತರೀಕೆರೆಯಿಂದ ಕ್ರೈನ್ ವಾಹನವು ವೇಗವಾಗಿ ಬಂದು ನನ್ನ ತಂದೆ ಚಾಲನೆ ಮಾಡುತ್ತಿದ್ದ ಬೈಕ್ ಗೆ ಡಿಕ್ಕಿಪಡಿಸಿದ ಕಾರಣ ನನ್ನ ತಂದೆಯ ಬೈಕ್ ಹಾಗೂ ನನ್ನ ತಂದೆ ಮತ್ತು ಮಾರ್ಕಂಡಯ್ಯನವರು ಕ್ರೈನ್ ವಾಹನದ ಚಕ್ರಕ್ಕೆ ಸಿಕ್ಕಿ ಹಾಕಿಕೊಂಡಿರುತ್ತಾರೆ. ಅಲ್ಲೇ ಸ್ಥಳದಲ್ಲಿ ಇದ್ದ ಜನರು ಅವರುಗಳನ್ನು ಟಯರ್ ನಿಂದ ತೆಗೆದು ಅಂಬುಲೆನ್ಸನಲ್ಲಿ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ನನ್ನ ತಂದೆಗೆ ಹೊಟ್ಟೆ ಭಾಗದ ಮೇಲೆ ಟಯರ್ ಹೋಗಿದ್ದ ಕಾರಣ ತೀವ್ರವಾದ ಗಾಯವಾಗಿ ಅಂಬುಲೆನ್ಸನಲ್ಲೇ ಮೃತಪಟ್ಟಿರುತ್ತಾರೆ. ಮಾರ್ಕಂಡಯ್ಯನವರಿಗೆ ಎರಡೂ ಕೈಗಳಿಗೆ ಪೆಟ್ಟಾಗಿರುತ್ತದೆ. ನನಗೆ ಬಾವಿಕೆರೆಯಲ್ಲಿದ್ದ ಪ್ರವೀಣ್ ಚಾಸಾ-3 ರವರು ಕರೆ ಮಾಡಿ ಘಟನೆ ಬಗ್ಗೆ ತಿಳಿಸಿರುತ್ತಾರೆ. ನಂತರ ನಾನು ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಹೋಗಿ ನೋಡಿದಾಗ ವೈದ್ಯರು ನನ್ನ ತಂದೆ ಮೃತ

ಪಟ್ಟು ವಿಚಾರ ತಿಳಿಸಿರುತ್ತಾರೆ. ಅದೇ ದಿನ ನಾನು ಲಕ್ಕವಳ್ಳಿ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ನಮ್ಮ ತಂದೆಯ ಶವಪರೀಕ್ಷೆಯನ್ನು ನೇರವೇರಿಸಿ ನಮ್ಮ ತಂದೆಯ ಶವವನ್ನು ನಮಗೆ ನೀಡಿರುತ್ತಾರೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ದೂರಾಗಿದ್ದು, ಸದರಿ ದಾಖಲೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ಪರ</u>** ಶ್ರೀ ಹೆಚ್ ಸಿ ಎಸ್ **<u>ವಕೀಲರಿಂದ.</u>**

ನನ್ನ ತಂದೆಗೆ 69 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ನನ್ನ ತಂದೆ ತೀರಿಹೋದ ಕಾರಣ ಪರಿಹಾರ ಕೇಳಿ, ಚಿಕ್ಕಮಗಳೂರಿನಲ್ಲಿ ಅರ್ಜಿ ಸಲ್ಲಿಸಿರುತ್ತೇನೆಂದರೆ ಸರಿ. ಕ್ರೈನ್ ಹೈವಿ ವಾಹನ ಎಂದರೆ ಸರಿ. ಕ್ರೈನ್ ವಾಹನ 20 ಕಿ ಮಿ ವೇಗದಲ್ಲಿ ಮಾತ್ರ ಚಲಿಸಲು ಸಾಧ್ಯ ಎಂದರೆ ಸರಿಯಲ್ಲ. ಅಪಘಾತವಾದ ದಿನ ನನ್ನ ತಂದೆ ಹೆಲ್ಮೆಟ್ ನ್ನು ಧರಿಸಿದ್ದರೂ ಇಲ್ಲವೂ ಎಂದು ನನಗೆ ಹೇಳಲು ಬರುವುದಿಲ್ಲ, ಅಪಘಾತವನ್ನು ನಾನು ಕಣ್ಣಾರೆ ಕಂಡಿರುವುದಿಲ್ಲ. ಅಪಘಾತವಾದ ವಿಚಾರವನ್ನು ಚಾಸಾ-3, ಪ್ರವೀಣ್ ರವರು ಕರೆ ಮಾಡಿ ತಿಳಿಸಿರುತ್ತಾರೆ. ಸದರಿ ಅಪಘಾತವಾಗಲು ನಿಮ್ಮ ತಂದೆಯ ಅಜಾಗರೂಕತೆಯೇ ಕಾರಣ ಎಂದರೆ ಸರಿಯಲ್ಲ. ನಿಮ್ಮ ತಂದೆ ಪೆಟ್ರೋಲ್ ಬಂಕ್ ನಲ್ಲಿ ಪೆಟ್ರೊಲ್ ಹಾಕಿಸಿಕೊಂಡು ಮುಖ್ಯ ರಸ್ತೆಗೆ ಅಚಾನಕ್ಕಾಗಿ ಬಂದ ಕಾರಣ ಅಪಘಾತ ಸಂಭಸಿದೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಆರೋಪಿಯ ತಪ್ಪು ಇಲ್ಲದ್ದರೂ ಸಹ ಪರಿಹಾರ ಪಡೆಯಲು ಸುಳ್ಳು ದೂರನ್ನು ನೀಡಿರುತ್ತಿರಾ ಎಂದರೆ ಸರಿಯಲ್ಲ. ಚಾಸಾ-3 ನಮ್ಮ ದೂರದ ಸಂಬಂಧಿಕರು. ಚಾಸಾ-3 ರವರು ನಿಮಗೆ ಘಟನೆ ಬಗ್ಗೆ ತಿಳಿಸಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ.

**<u>ಮರುವಿಚಾರಣೆ</u>:** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

Sd/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**